ನಂಬಿಕೆ ಇಲ್ಲ. ಹಾಕಿದ ಬಾವಿಗಳಲ್ಲಾ ಸಫಲವಾಗುವಂಥ ಕಾರ್ಯಕ್ರಮ ತೆಗೆದುಕೊಳ್ಳುವುದಕ್ಕೆ ನಮ್ಮ ತಂತ್ರಜ್ಞಾನ ಇನ್ನು ಬೆಳೆದಿಲ್ಲ. ವಿಫಲವಾಗುವುದು ಸಹಜ.

ಬೆಂಗಳೂರು ನಗರವಲ್ಲಿನ ನಗರಪಾಲಿಕೆಯ ಪರವಾನಿಗೆಯ ಬಗ್ಗೆ

೧೬೯(೩೧೮) ಶ್ರೀ ಕೆ.ಪೆಚ್. ಪಾಟೀಲ್.—ಮಾನ್ಯ ಕಾನೂನು ಸಂಸದೀಯ ವ್ಯವಹಾರಗಳು ಆಹಾರ ಸರಬರಾಜು ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ :—

ಅ) ಬೆಂಗಳೂರು ನಗರಪಾಲಿಕೆ ಪರವಾನಿಗೆಯನ್ನು ಮಂಜೂರು ಮಾಡಿರುವ ಬಹು ಅಂತಸ್ತಿನ ಘಟಿಡಿ ಕಟ್ಟಡಗಳಲ್ಲಿ ಆಕ್ಯುಪೆನ್ಸಿ ಸರ್ಟಿಫಿಕೇಟುಗಳಿಗೆ ಮಂಜೂರಾತಿಗಾಗಿ ಬಂದಿರುವ ಅರ್ಜಿಗಳೆಷ್ಟು ?

ಆ) ಅವುಗಳಲ್ಲಿ ಆಕ್ಯುಪೆನ್ಸಿ ಸರ್ಟಿಫಿಕೇಟುಗಳಿಗೆ ಕೊಡದಿರುವ ಕಟ್ಟಡಗಳೆಷ್ಟು, ಹಾಗೆ ಕೊಡದಿರಲು ಬಲವಾದ ಕಾರಣಗಳೇನು ?

ಪ್ರೊ॥ ಎ. ಲಕ್ಷ್ಮೀಸಾಗರ್ (ನಗರಾಭಿವೃದ್ಧಿ ಕಾನೂನು ಸಂಸದೀಯ ವ್ಯವಹಾರ ಆಹಾರ ಸರಬರಾಜು ಮಂತ್ರಿಗಳು).—

ಅ) ೧೧೨

ಆ) ೯

ಪಲಾನಿಭಂದ ನೆಗಳಿಗೆ ವ್ಯತಿರಿಕ್ತವಾಗಿ ಮಂಜೂರು ಮಾಡಿರುವ ಕಟ್ಟಡಗಳಿಗೆ ಆಕ್ಯುಪೆನ್ಸಿ ಸರ್ಟಿಫಿಕೇಟುಗಳನ್ನು ನೀಡಿಲ್ಲ. ಆದ್ದರಿಂದ ಮಂಜೂರಾದ ನಕ್ಷೆಗೆ ಅನುಗುಣವಾಗಿ ಕಟ್ಟಡಗಳನ್ನು ಕಟ್ಟಿದ್ದರೂ ಸಹ ಪಲಯ ನಿಭಂದನೆಗಳಿಗೆ ವ್ಯತಿರಿಕ್ತವಾಗಿ ಮಂಜೂರಾಗಿದ್ದ ನಕ್ಷೆಗಳ ಕಟ್ಟಡಗಳಿಗೆ ಆಕ್ಯುಪೆನ್ಸಿ ಸರ್ಟಿಫಿಕೇಟ್ ನೀಡಿಲ್ಲ.

ಶ್ರೀ ಕೆ.ಪೆಚ್. ಪಾಟೀಲ್.—೯ ಕಟ್ಟಡಗಳಿಗೆ ಆಕ್ಯುಪೆನ್ಸಿ ಸರ್ಟಿಫಿಕೇಟ್ ಕೊಡಲಾಗಿದೆ ಎಂದು ಹೇಳಿದ್ದೀರಿ. ಆ ಕಟ್ಟಡಗಳು ಯಾವುವು ? ೧೧೨ ಕಟ್ಟಡಗಳಲ್ಲಿ ಆಕ್ಯುಪೆನ್ಸಿ ಕೋರಿ ಅಪ್ಲಿಕೇಷನ್ ಬಂದಿದೆ ಎಂದು ಹೇಳಿದ್ದೀರಿ. ಈ ಅಪ್ಲಿಕೇಷನ್‌ಗಳನ್ನು ಯಾವಾಗ ನಿರ್ವಾಲಿ ಮಾಡುತ್ತೀರಿ ? ತಮಗೆ ಗೊತ್ತಿದೆಯೋ ಇಲ್ಲವೋ ಗೊತ್ತಿಲ್ಲ. ಒಂದು ಫ್ಲೋರ್‌ಗೆ ಆಕ್ಯುಪೆನ್ಸಿ ಸರ್ಟಿಫಿಕೇಟ್ ಕೊಡಲು ೧ ಲಕ್ಷ ರೂಪಾಯಿಗಳ ವರೆಗೂ ಡಿಪಾಸ್ಯಾಂಡ್ ಮಾಡುತ್ತಾರೆಂದು ನನ್ನ ಕಡೆ ಅನೇಕ ಜನರು ಅರ್ಜಿಗಳನ್ನು ಕೊಟ್ಟಿದ್ದಾರೆ. ಇವರ ಬಗ್ಗೆ ತನಿಖೆ ಮಾಡಿ ಕ್ರಮವನ್ನು ಕೈಗೊಳ್ಳುತ್ತೀರಾ ?

ಶ್ರೀ ಎ. ಲಕ್ಷ್ಮೀಸಾಗರ್.—ಹಣವನ್ನು ವಸೂಲಿ ಮಾಡಿರುವ ಬಗ್ಗೆ ಮಾನ್ಯ ಸದಸ್ಯರಿಗೆ ಗೊತ್ತಿದ್ದರೆ ಅಥವಾ ಹಣವನ್ನು ಕೊಟ್ಟಂಥ ಯಾವುದಾದರೂ ಉದಾಹರಣೆ ಕೊಟ್ಟರೆ ಅವರ ಬಗ್ಗೆ ವಿಚಾರಣೆ ಘಾಡಿ ಕಾನೂನು ಪ್ರಕಾರ ಅವರ ಮೇಲೆ ಕ್ರಮ ತೆಗೆದುಕೊಳ್ಳುವುದಕ್ಕೆ ನಾನು ಸಿದ್ಧನಿದ್ದೇನೆ. ಇನ್ನು ೯ ಕಟ್ಟಡಗಳು ಯಾವುವು ಎಂದು ಕೇಳಿದ್ದೀರಿ. ೧) ಗಾಲ್ಫ್ ಲಿಂಕ್ ಅಪಾರ್ಟ್‌ಮೆಂಟ್ ೨) ಮೆಷಿನ್ ಟೂಲ್ಸ್ ಪ್ರೈವೇಟ್ ಲಿಮಿಟೆಡ್ ೩) ಕಾಂಟಿನೆಂಟಲ್ ಎಕ್ಸ್‌ಪೋರ್ಟ್ಸ್ ೪) ಲಾಲ್‌ಚಂದ್ ದಿಗಂಬರ್ ಚಂದ್ ೫) ವಿನಾಯಕ ಎಂಟರ್‌ಪ್ರೈಸಸ್ ೬) ಮಹಮದ್ ಸಲೀಮ್ ೭) ಕರ್ಜನ್ ರೋಡ್ ೭) ಸೋನಾ ಪಾತ್ರ ಸೋನಿ ಮಿಲ್ಲರ್ ರೋಡ್ ೮) ಏಲೇಜಾ ಕಾಂಪ್ಲೆಕ್ಸ್, ಮುನಿರೆಡ್ಡಿಪಾಳ್ಯ, ೯) ಒಕ್ಕಲಿಗರ ಸಂಘ ಹಬ್ಸಿಸ್ ವೃತ್ತ. ಇನ್ನೂ ಒಂದು ಕೇಳಿದ್ದೀರಿ. ೧೧೨ ಅಪ್ಲಿಕೇಷನ್‌ಗಳಲ್ಲಿ ೧೦೩ಕ್ಕೆ ಆಕ್ಯುಪೆನ್ಸಿ ಸರ್ಟಿಫಿಕೇಟನ್ನು ಕೊಡಲಾಗಿದೆ. ಇವರಲ್ಲಿ ಎರಡು ಭಾಗ ಇದೆ. ಮಾನ್ಯ ಸದಸ್ಯರಿಗೆ ಗೊತ್ತಿರುವ ಹಾಗೆ ಕೆಲವರು ಹೈಕೋರ್ಟಿನ ತೀರ್ಮಾನದ ವಿರುದ್ಧ ಸುಪ್ರೀಂ ಕೋರ್ಟಿಗೆ ಹೋದರು ಸುಪ್ರೀಂ ಕೋರ್ಟಿನಲ್ಲಿ ಕೇಸ್ ಇದ್ದರೂ ಸಬ್ಜೆಕ್ಟ್ ಟು ಡಿಸಿಷನ್ ಎಂದು ಕೆಲವರಿಗೆ ನೀವು ಸರ್ಟಿಫಿಕೇಟ್‌ಗಳನ್ನು ಕೊಡಿ ಎಂದು ಹೈಕೋರ್ಟಿನವರು ಹೇಳಿದರು ಆ ಕಂಡೀಷನ್‌ನಂತೆ ಆಕ್ಯುಪೆನ್ಸಿ ಸರ್ಟಿಫಿಕೇಟನ್ನು ಕೊಟ್ಟಿದ್ದೇವೆ. ಎಷ್ಟು ಜನರಿಗೆ ಈ ತರಹ ಕೊಡುವುದಕ್ಕೆ ಸಾಧ್ಯ ಇದೆಯೋ ಅಷ್ಟು ಜನರಿಗೆ ಕೊಟ್ಟಿದ್ದೇವೆ.

ಶ್ರೀ ಕೆ. ಪೆಚ್. ಪಾಟೀಲ್.—ಇತ್ತೀಚೆಗೆ ಸುಪ್ರೀಂ ಕೋರ್ಟ್‌ನವರು ೧ ಪ್ಲಸ್ ೩ ಕ್ಕಿಂತ ಹೆಚ್ಚಾಗಬಾರದೆಂದು ಆದೇಶಕೊಟ್ಟಿದ್ದಾರೆ. ಆ ಕಟ್ಟಳೆಗೆ ಅನುಗುಣವಾಗಿ ಇನ್ನು ಮೇಲೆ ೧ ಪ್ಲಸ್ ೩ ಕ್ಕಿಂತ ಹೆಚ್ಚಿಗೆ ಕೊಡುವುದಿಲ್ಲವೆಂದು ನಿರ್ದಾಕ್ಷಿಣ್ಯವಾಗಿ ಆರ್ಡರ್ ಮಾಡುತ್ತೀರಾ ? ಅಥವಾ ಈ ವ್ಯಾಖ್ಯಾ

ಅರ್ಜಿಗಳಿಗೆ ಎಷ್ಟು ದಿವಸಗಳೊಳಗೆವಿಲೇವಾರಿ ಮಾಡುವುದಕ್ಕೆ ನಿಮ್ಮ ಆಫೀಸರ್‌ಗಳಿಗೆ ಇನ್‌ಸ್ಟ್ರಕ್ಷನ್ ಕೊಡುತ್ತೀರಾ ? ೩ ತಿಂಗಳೋ ೬ ತಿಂಗಳೋ ೧ ವರ್ಷವೋ ಎಷ್ಟು ದಿವಸಗಳೊಳಗೆ ನಿಖಾಲೆ ಮಾಡಬೇಕೆಂದು ನಿಮ್ಮ ಅಧಿಕಾರಿಗಳಿಗೆ ನಿರ್ದಾಕ್ಷಿಣ್ಯವಾಗಿ ಆದೇಶವನ್ನು ಕೊಡುತ್ತೀರಾ ?

ಶ್ರೀ ಎ. ಲಕ್ಷ್ಮೀಸಾಗರ್.—ಅಧ್ಯಕ್ಷರೇ, ಸುಪ್ರೀಂಕೋರ್ಟಿನ ತೀರ್ಮಾನದ ಕಾಪಿ ನನಗೆ ಇನ್ನೂ ಬಂದಿಲ್ಲ. ಅದರ ನಕಲು ಪ್ರತಿ ಬಂದಮೇಲೆ, ಅದರ ಬಗ್ಗೆ ಪೂರ್ಣವಾಗಿ ಅಭ್ಯಾಸಮಾಡಿ ಅದರ ಮಹತ್ವ ಏನಿದೆ ಎಂದು ತಿಳಿದುಕೊಂಡು ಅದರಂತೆ ನಡೆದು ಕೊಳ್ಳುತ್ತೇನೆ. ಏಕೆಂದರೆ ಸುಪ್ರೀಂ ಕೋರ್ಟಿನ ತೀರ್ಮಾನದ ವಿರುದ್ಧ ಯಾರೂ ನಡೆದುಕೊಳ್ಳುವುದಕ್ಕಾಗುವುದಿಲ್ಲ.

ಶ್ರೀ ಕೆ. ಪೆಚ್. ಪಾಟೀಲ್ —ಅಧ್ಯಕ್ಷರೇ ಸುಪ್ರೀಂ ಕೋರ್ಟಿನಲ್ಲಿ ನಿಮ್ಮ ವಕೀಲರೂ ಕೂಡ ಹಾಜರಿರುತ್ತಾರೆ. ಅಲ್ಲಿ ಈ ಬಗ್ಗೆ ಒಂದು ನಿರ್ಣಯ ಆದಕೂಡಲೇ ಅದರ ನಕಲು ಪ್ರತಿಗಳನ್ನಾದರೂ ಕಳುಹಿಸಿಕೊಡಬೇಕಾಗಿತ್ತು. ಅದು ಅವರ ಕರ್ತವ್ಯವಾಗಿತ್ತು. ಅವರುಗಳು ಸೂಕ್ತ ರೀತಿಯಲ್ಲಿ ಕೆಲಸ ನಿರ್ವಹಿಸುತ್ತಿಲ್ಲವೇ ? ಸರಿಯಾಗಿ ಕೆಲಸ ನಿರ್ವಹಣೆ ಮಾಡದಿದ್ದಲ್ಲಿ ಆ ಬಗ್ಗೆ ಸೂಕ್ತ ಕ್ರಮವನ್ನು ತಾವುಗಳು ತೆಗೆದುಕೊಳ್ಳಬೇಕು. ಒಂದು ಸರಿಯಾದ ವ್ಯವಸ್ಥೆ ಆಗಬೇಕು.

ಅಧ್ಯಕ್ಷರು.—ಪ್ರಶ್ನೆ ಕ್ರಮಾಂಕ, ೧೭೦—ತಡೆಹಿಡಿಯಲಾಗಿದೆ.

ಪ್ರಶ್ನೆ ಕ್ರಮಾಂಕ. ೧೭೧—ತಡೆಹಿಡಿಯಲಾಗಿದೆ.

ಶ್ರೀ ಎಂ. ಎಸ್. ಪಾಟೀಲ್.—ಅಧ್ಯಕ್ಷರೇ, ಈ ತಡೆಹಿಡಿಯಲಾದ ಪ್ರಶ್ನೆಗಳಿಗೆ ಯಾವಾಗ ಉತ್ತರ ಕೊಡುತ್ತಾರೆ ಎಂದು ತಿಳಿಸಬೇಕು.

ಶ್ರೀ ಶಿವಾನಂದ ಕೌಜಲಗಿ.—ಹಿಟ್ಟಣಗಿ ಗ್ರಾಮದಲ್ಲಿ ೧೦ ಸಾವಿರ ಜನಸಂಖ್ಯೆ ಇದೆ. ಇನ್ನೂ ಆ ಗ್ರಾಮಕ್ಕೆ ಟ್ರಕ್‌ನಲ್ಲಿ ನೀರನ್ನು ಕೊಡುತ್ತಿದ್ದಾರೆ.

ಅಧ್ಯಕ್ಷರು.—ನಜೀರ್‌ಸಾಬ್‌ರವರೇ, ಆ ಪ್ರಶ್ನೆಯನ್ನು ಯಾವ ಕಾರಣಕ್ಕೆ ತಡೆಹಿಡಿದಿದ್ದೀರಿ ಎಂದು ಹೇಳಿ.

ಶ್ರೀ ಅಬ್ದುಲ್ ನಜೀರ್‌ಸಾಬ್. —ಅಧ್ಯಕ್ಷರೇ, ಜಿಲ್ಲೆಯ ಎಲ್ಲಾ ಮೂಲಗಳಿಂದ ಆ ಬಗ್ಗೆ ವಿವರಗಳು ಬರಬೇಕಾಗಿದೆ. ಮುಂದಿನ ವಾರದಲ್ಲಿ ವಿವರಗಳನ್ನು ಪಡೆದು ಉತ್ತರಿಸುತ್ತೇನೆ.

ಅಧ್ಯಕ್ಷರು.—ಮುಂದಿನ ವಾರದಲ್ಲಿ ಉತ್ತರ ಕೊಡುತ್ತಾರೆ.

ಬೆಂಗಳೂರಿನ ನಗರದಲ್ಲಿ ಕೊರೆದಿರುವ ಕೊಳವೆ ಬಾವಿಗಳ ಬಗ್ಗೆ

೧೭೨ (೪೬೧) ಶ್ರೀ ಕೆ. ಜೆ. ಜಾರ್ಜ್ (ಭಾರತೀನಗರ).—ಪೌರಾಡಳಿತ ಕಾನೂನು, ಸಂಸದೀಯ, ವ್ಯವಹಾರಗಳು, ಆಹಾರ ಮತ್ತು ನಾಗರೀಕ ಸರಬರಾಜು ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ :—

ಅ) ಬೆಂಗಳೂರು ನಗರದಲ್ಲಿ ಕೊರೆದಿರುವ ಕೊಳವೆ ಬಾವಿಗಳ ಸಂಖ್ಯೆ? (ಕ್ಷೇತ್ರವಾರು ಅಂಕಿ ಗಳನ್ನು ಕೊಡತಕ್ಕದ್ದು).

ಆ) ಅದರಲ್ಲಿ ವಿಫಲವಾದ ಕೊಳವೆ ಬಾವಿಗಳ ಸಂಖ್ಯೆ ?

ಪ್ರೊ॥ ಎ. ಲಕ್ಷ್ಮೀಸಾಗರ್ (ನ್ಯಾಯ ಮತ್ತು ಸಂಸದೀಯ ವ್ಯವಹಾರ, ಆಹಾರ ಮತ್ತು ನಾಗರೀಕ ಸರಬರಾಜು ಮತ್ತು ನಗರಾಭಿವೃದ್ಧಿ ಸಚಿವರು).—

ಆ) ೧,೪೧೪